ಕರ್ನಾಟಕ ಸರ್ಕಾರ

ಖಜಾನೆ ಇಲಾಖೆ

ಖಜಾನೆ ನಿರ್ದೇಶಕರ ಕಾರ್ಯಾಲಯ, ಡಾ:ಅಂಬೇಡ್ಕರ್ ವೀಧಿ, ವಿ.ವಿ.ಗೋಪುರ, ಬೆಂಗಳೂರು-560001.

ಸಂ:ಖನಿ/ಸಿಬ್ಬಂದಿ(5)/ಸಿಆರ್38/2017-18 ದಿನಾಂಕ: 21.12.2017

# ಅಧಿಸೂಚನೆ

ವಿಷಯ: ಶ್ರೀಮತಿ ಬಿ.ಕೆ. ಪವಿತ್ರ & ಇತರರು ಯೂನಿಯನ್ ಆಫ್ ಇಂಡಿಯಾದ ವಿರುದ್ಧ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಸಿವಿಲ್ ಅಪೀಲು ಸಂಖ್ಯೆ: 2368/2011ರಲ್ಲಿ ದಾಖಲಿಸಿರುವ ಅರ್ಜಿಯ ಪ್ರಕರಣಕ್ಕೆ ಸಂಬಂಧಿಸಿದಂತೆ, ಘನ ನ್ಯಾಯಾಲಯದ ದಿನಾಂಕ: 09.02.2017ರ ತೀರ್ಪಿನಲ್ಲಿರುವ ಮಾರ್ಗಸೂಚಿಗಳನ್ವಯ, ಸಿದ್ಧಪಡಿಸಿರುವ ಖಜಾನೆ ಇಲಾಖೆಯ 'ಬಿ' ವೃಂದದ ಮತ್ತು 'ಸಿ' ವೃಂದದ ವಿಭಾಗವಾರು ಮತ್ತು ವೃಂದವಾರು ಅಂತಿಮ ಪುನರಾವಲೋಕನಾ ಜ್ಯೇಷ್ಠತಾ ಪಟ್ಟಿಗಳನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ: 1) ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ದಾಖಲಿಸಿರುವ ಸಿವಿಲ್ ಅಪೀಲು ಸಂಖ್ಯೆ: 2368/2011.Dated: 09.02.2017ರ ತೀರ್ಪು

2) ಸರ್ಕಾರದ ಆದೇಶ ಸಂಖ್ಯೆ: DPAR 182, SRR 2011 ದಿ: 06.05.2017.

3) ಸಮಸಂಖ್ಯೆ ಅಧಿಸೂಚನೆ ಖಜಾನೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾದ ದಿನಾಂಕ: 15.11.2017 ಮತ್ತು ದಿ: 27.11.2017.

*****

ಉಲ್ಲೇಖ (1)ರಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಶ್ರೀಮತಿ ಬಿ.ಕೆ. ಪವಿತ್ರ & ಇತರರು ಯೂನಿಯನ್ ಆಫ್ ಇಂಡಿಯಾದ ವಿರುದ್ಧ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಸಿವಿಲ್ ಅಪೀಲು ಸಂಖ್ಯೆ: 2368/2011 ಮತ್ತು 2369/2011ರಲ್ಲಿ ದಾಖಲಿಸಿರುವ ಅರ್ಜಿಗಳ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕ: 09.02.2017ರಂದು ಹೊರಡಿಸಲಾದ ತೀರ್ಪಿನಲ್ಲಿ 1978 ರಿಂದ 2016 ರವರೆಗೆ ಈಗಾಗಲೇ ಅಸ್ತಿತ್ವದಲ್ಲಿದ್ದ ಮೀಸಲಾತಿ ನಿಯಮಗಳನ್ನು ಅಳವಡಿಸಿಕೊಂಡು ಕಾಲಕಾಲಕ್ಕೆ ನೀಡಲಾದ ಎಲ್ಲಾ ವೃಂದದ ಮುಂಬಡ್ತಿ ಹಾಗೂ ಜ್ಯೇಷ್ಠತಾ ಪಟ್ಟಿಗಳಲ್ಲಿನ ಬಡ್ತಿ ದಿನಾಂಕಗಳನ್ನು "Other catch-up rule" ಹಾಗೂ ಸಂಬಂಧಿಸಿದ ಸರ್ಕಾರದ ಆದೇಶಗಳನ್ವಯ ಪರಿಷ್ಕರಿಸಿ ಕ್ರಮ ಕೈಗೊಳ್ಳುವಂತೆ ದಿನಾಂಕ: 09.02.2017ರ ತೀರ್ಪಿನಲ್ಲಿ ಆದೇಶಿಸಿರುವ ಹಿನ್ನೆಲೆಯಲ್ಲಿ, ಉಲ್ಲೇಖ (3)ರ ಅಧಿಸೂಚನೆಯಲ್ಲಿ ಖಜಾನೆ ಇಲಾಖೆಯ 'ಬಿ' ವೃಂದದ ಮತ್ತು 'ಸಿ' ವೃಂದದ ವಿಭಾಗವಾರು ಮತ್ತು ವೃಂದವಾರು 1978 ರಿಂದ 2016ರವರೆಗಿನ ತಾತ್ಕಾಲಿಕ ಪುನರಾವಲೋಕನಾ ಜ್ಯೇಷ್ಠತಾ ಪಟ್ಟಿಗಳನ್ನು ಪ್ರಕಟಿಸಿ ದಿನಾಂಕ: 07.12.2017 ರೊಳಗಾಗಿ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ, ಈವರೆಗೂ ಸ್ವೀಕೃತಗೊಂಡ ಎಲ್ಲಾ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ, ಅರ್ಹ ಆಕ್ಷೇಪಣೆಗಳನ್ನು ಅಳವಡಿಸಿಕೊಂಡು 1978 ರಿಂದ 2016 ರವರೆಗಿನ ಎಲ್ಲಾ ವೃಂದಗಳ ಪುನರಾವಲೋಕನಾ ಅಂತಿಮ ಜ್ಯೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸಿದೆ. ಸದರಿ ಜ್ಯೇಷ್ಠತಾ ಪಟ್ಟಿಗಳನ್ನು ರಾಜ್ಯ ಪತ್ರದಲ್ಲಿ, ಖಜಾನೆ ವೆಬ್‌ಸೈಟ್ **http://karnatakatreasury.gov.in/** ಹಾಗೂ ಖಜಾನೆ ಗಣಕ ಜಾಲದಲ್ಲಿ ಪ್ರಕಟಿಸಲಾಗಿದೆ.

ಖಜಾನೆ ನಿರ್ದೇಶಕರು,
ಬೆಂಗಳೂರು. 21/12/17

ಪ್ರತಿಯನ್ನು:

1. ಸರ್ಕಾರದ ಕಾರ್ಯದರ್ಶಿಗಳು, ಆಡಳಿತ ಮತ್ತು ಸಂಪನ್ಮೂಲ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ಖಜಾನೆ-2 ಮತ್ತು ಪದನಿಮಿತ್ತ ಖಜಾನೆ ಆಯುಕ್ತರು, ಆರ್ಥಿಕ ಇಲಾಖೆ, 7ನೇ ಮಹಡಿ, ಕಾಳಿದಾಸ ಮಾರ್ಗ, ವಾಣಿಜ್ಯ ತೆರಿಗೆ ಕಛೇರಿಗಳ ಕಟ್ಟಡ, ಗಾಂಧಿನಗರ, ಬೆಂಗಳೂರು.
3. ಸಂಪಾದಕರು ಹಾಗೂ ಪ್ರಕಾಶಕರು, ಕರ್ನಾಟಕ ರಾಜ್ಯ ಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ ಇವರಿಗೆ ರಾಜ್ಯ ಪತ್ರದಲ್ಲಿ ಪ್ರಕಟಿಸಲು.
4. ಉಪ ನಿರ್ದೇಶಕರು, ಖಜಾನೆ ಗಣಕ ಜಾಲ ಕೇಂದ್ರ ಇವರಿಗೆ- ಖಜಾನೆ ಗಣಕ ಜಾಲದಲ್ಲಿ ಪ್ರಕಟಿಸಲು.